# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ.ನಂ. 1815 / 2024**

ಫಿರ್ಯಾದಿಃ ಆಶ್ರಯ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ. ಕಾರವಾರ.

ವಿರುದ್ಧ

ಆರೋಪಿತರು

| | | |
|---|---|---|
| ಹೆಸರು | : | ಶ್ರೀ. ವಿಶ್ವನಾಥ ಕೃಷ್ಣ ಜೋಷಿ, |
| ವಯಸ್ಸು | : | 46 ವರ್ಷ, |
| ಉದ್ಯೋಗ | : | ಮೀನುಗಾರರು, |
| ವಾಸ | : | 38, ಸಣ್ಣ ಮಸೀದಿಯ ಹತ್ತಿರ, ನಂದನಗದ್ದಾ, ಕಾರವಾರ, ಉ.ಕ. |

## ಆಪಾದನೆ ಹೇಳಿಕೆ

ಪ್ರಸ್ತುತ ಪ್ರಕರಣದ ಆರೋಪಿತರಾದ ನೀವು ಫಿರ್ಯಾದಿ ಆಶ್ರಯ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ. ಸದಾಶಿವಗಡದ ಗ್ರಾಹಕರಾಗಿದ್ದು, ಫಿರ್ಯಾದಿ ಸೊಸೈಟಿಯಲ್ಲಿ ವ್ಯಾಪಾರದ ಸಲುವಾಗಿ ಸಾಲಕ್ಕಾಗಿ ಅರ್ಜಿ ನೀಡಿದ್ದು, ಅದರಂತೆ ಫಿರ್ಯಾದಿ ಸೊಸೈಟಿಯು ರೂ.2,50,000/- ವ್ಯಾಪಾರ ಸಾಲವನ್ನು ಮಂಜೂರು ಮಾಡಿದ್ದು, ಸದರಿ ಸಾಲವನ್ನು 4 ವರ್ಷದಲ್ಲಿ ಸಮನಾದ ಕಂತಿನಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದು, ಆದರೆ ನೀವು ಸಾಲವನ್ನು ಮರುಪಾವತಿಸದೇ ಇದ್ದು, ಫಿರ್ಯಾದಿಯವರು ಹಣವನ್ನು ಮರುಪಾವತಿಸಲು ಕೇಳಿದಾಗ ನೀವು ಎಚ್.ಡಿ.ಎಫ್.ಸಿ. ಬ್ಯಾಂಕ್, ಕಾರವಾರ ಶಾಖೆಯ ಚೆಕ್ ನಂ.000003 ನ್ನು ದಿನಾಂಕ 15-06-2024 ರೂ.5,64,402/- ಎಂದು ನಮೂದಿಸಿ ನೀಡಿದ್ದು, ಫಿರ್ಯಾದಿಯು ಸದರಿ ಚೆಕ್ ನ್ನು ನಗದಿಕರಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚಿತ್ತಾಕುಲ ಶಾಖೆಗೆ ಸಲ್ಲಿಸಿದಾಗ, ಸದರಿ ಬ್ಯಾಂಕಿನವರು "Account Closed" ಎಂಬ ಹಿಂಬರಹ ನೀಡಿದ್ದು, ನಂತರ ಫಿರ್ಯಾದಿಯವರು ದಿನಾಂಕ 02-07-2024 ರಂದು ನೋಟಿಸ್ಸು ನೀಡಿ, 15 ದಿನಗಳ ಒಳಗೆ ಸಾಲದ ಹಣವನ್ನು ಮರು ಪಾವತಿಸಲು ಕೇಳಿಕೊಂಡಿದ್ದು, ಸದರಿ ನೋಟಿಸ್ಸನ್ನು ನೀವು ದಿನಾಂಕ 03-07-2024 ರಂದು ಸ್ವೀಕರಿಸಿದ್ದರೂ ಸಹ ಚೆಕ್ಕಿನ ಹಣವನ್ನು ಫಿರ್ಯಾದಿಗೆ ಹಿಂದಿರುಗಿಸದೇ ಇರುವ ಕಾರಣಕ್ಕಾಗಿ ನೀವು ಕಲಂ 138 ನೆಗೋಷಿಯೇಬಲ್ ಇನ್ಸ್ಟುಮೆಂಟ್ ಆಕ್ಟ್ ಅಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆ: 1 ಈಗ ಓದಿ ಹೇಳಿದ ಆಪಾದನೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆ: 2 ಈಗ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗ ಬಯಸುತ್ತೀರೋ?

ಉತ್ತರಃ

(ಆಪಾದನೆಯನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು)

ಕಾರವಾರ
ದಿಃ 20-08-2025

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಕಾರವಾರ.